

ಬಿಸಿಲು ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ವಿದ್ಯೆ ಮತ್ತು ಹಣ

'ನೀನು ಮುಂದೆ ಏನಾಗಬೇಕೆಂದಿದ್ದೀಯಾ?'
'ಡಾಕ್ಟರ್/ಇಂಜಿನಿಯರ್ ಆಗಬೇಕೆಂದಿದ್ದೇನೆ'
'ನೀನು ಡಾಕ್ಟರ್/ಇಂಜಿನಿಯರ್ ಆಗಿ ಏನು ಮಾಡುತ್ತೀಯಾ?'
'ಬಡವರ ಸೇವೆ ಮಾಡುತ್ತೇನೆ!'

ಇದು ಪ್ರೌಢಶಾಲೆಯ ಮಕ್ಕಳನ್ನು ಕೇಳಿದಾಗ ಥಟ್ ಅಂತ ಬರುವ ಉತ್ತರ. ಒಂದಲ್ಲ, ಎರಡಲ್ಲ ನಮ್ಮ ಮಠದ ಅನೇಕ ಶಾಲೆಗಳ ಮಕ್ಕಳನ್ನು ಕೇಳಿದಾಗಲೂ ನಮಗೆ ಬಂದ ಉತ್ತರ ಇದೇ ಆಗಿದೆ. ಇದು ವಿಶೇಷವಾಗಿ ಹಳ್ಳಿಯ ವಾತಾವರಣದಲ್ಲಿ ಬೆಳೆದ ಮಕ್ಕಳ ಉತ್ತರ. ಇದೇ ಪ್ರಶ್ನೆಯನ್ನು ಅಮೇರಿಕಾದಲ್ಲಿರುವ ಇದೇ ವಯೋಮಾನದ ಮಕ್ಕಳಿಗೆ ಕೇಳಿದಾಗ ಅವರು ತಮ್ಮೆರಡೂ ಭುಜಗಳನ್ನು ಗಲ್ಲದಡಿ ಆಕುಂಚನಗೊಳಿಸಿಕೊಂಡು (shrugging their shoulders) ವಿಶಿಷ್ಟಭಂಗಿಯಲ್ಲಿ ಕೈಚೆಲ್ಲಿ ನಮಗೆ ನೀಡಿದ ಉತ್ತರ "I don't know, I have not decided yet". ನಮ್ಮ ದೇಶದ ಮಕ್ಕಳಿಗೆ ಆ ವಯಸ್ಸಿನಲ್ಲಿ ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಕೆಲವೊಂದು ಆದರ್ಶದ ಕನಸುಗಳಿರುತ್ತವೆ. ಅವರ ಮನೋಧರ್ಮ ಹಣ ಮಾಡುವುದರ ಕಡೆಗೆ ಇರುವುದಿಲ್ಲ; ಬದಲಾಗಿ ಸಮಾಜದ ಒಳಿತಿಗಾಗಿ ಏನಾದರೂ ಮಾಡಬೇಕೆನ್ನುವ ತುಡಿತ ಇರುತ್ತದೆ. ಆದರೆ ಪೋಷಕರ ಮನೋಭಾವ ಮಕ್ಕಳಂತೆ ಇರುವುದಿಲ್ಲ. ತಮ್ಮ ಮಗ/ಮಗಳು ಮುಂದೆ ಉತ್ತಮ ಉದ್ಯೋಗ ಗಳಿಸಿ ಹೇರಳವಾಗಿ ಹಣ ಸಂಪಾದಿಸಿ 'ಸುಖ'ದ ಸುಪ್ಪತ್ತಿಗೆಯನ್ನೇರಬೇಕೆಂಬ ವಾಂಛೆಯನ್ನು ಹೊಂದಿರುತ್ತಾರೆ. ಕ್ರಮೇಣ ಮಕ್ಕಳು ಬೆಳೆದಂತೆ ತಂದೆ ತಾಯಿಗಳ ಮನೋಭಾವವನ್ನೇ ಮೈಗೂಡಿಸಿಕೊಂಡು ಆದರ್ಶಗಳನ್ನು ಗಾಳಿಗೆ ತೂರಿ ಬಡವರ 'ಸೇವೆ' ಮಾಡುವ ಬದಲು 'ಶೋಷಣೆ' ಮಾಡುವ ಧೂರ್ತರಾದರೆ (educated scoundrels) ಆಶ್ಚರ್ಯಪಡಬೇಕಾಗಿಲ್ಲ. ಬಟ್ಟೆ ಎಷ್ಟೇ ಶುಭ್ರವಾಗಿದ್ದರೂ ಅದರ ಮೇಲೆ ಕೆಸರು ಸಿಡಿದರೆ ಹೇಗೆ ಕೊಳೆಯಾಗುತ್ತದೆಯೋ ಹಾಗೆ ಬಾಲ್ಯಾವಸ್ಥೆಯಲ್ಲಿ ನಿರ್ಮಲವಾಗಿದ್ದ ಮಕ್ಕಳ ಮನಸ್ಸು ಕ್ರಮೇಣ ಪ್ರೌಢಾವಸ್ಥೆಯನ್ನು ತಲುಪಿದಾಗ ಕೊಳಕು ಸಾಮಾಜಿಕ ಪರಿಸರದಲ್ಲಿ ಮಲಿನವಾಗಿ ತನ್ನ ಪರಿಶುದ್ಧತೆಯನ್ನು ಕಳೆದುಕೊಳ್ಳುತ್ತದೆ.

ಮಕ್ಕಳಿಗೆ ಪೋಷಕರು ಹೆಚ್ಚು ಹೆಚ್ಚು ಹಣ ಸಂಪಾದನೆ ಮಾಡಲು ಬೇಕಾದ ವೃತ್ತಿಶಿಕ್ಷಣವನ್ನು ಕೊಡಿಸಲು ಕಷ್ಟಪಡುತ್ತಾರೆ. ಅತಿ ಅಗತ್ಯವಾದ ಗುಣ ಸಂಪಾದನೆಯನ್ನು ಮಾಡಲು ಬೇಕಾದ ನೈತಿಕ ಶಿಕ್ಷಣವನ್ನು ಕೊಡಿಸಲು ಅಷ್ಟಾಗಿ ಪ್ರಯತ್ನಿಸುವುದಿಲ್ಲ. ತಮ್ಮ ಮಗ/ಮಗಳು ಹೆಚ್ಚು ಹೆಚ್ಚು ಹಣವನ್ನು ಗಳಿಸುವ ನೌಕರಿಯನ್ನು ಪಡೆಯಲು ಸಹಾಯಕವಾದ ಶಿಕ್ಷಣವನ್ನು ಕೊಡಿಸಿದರೆ ಅವರು ಸುಖದಿಂದ ಇರುತ್ತಾರೆಂಬ ಭ್ರಮೆ ಅವರದು. ಶಿಕ್ಷಣವೆಂದರೆ ಕೇವಲ ಪುಸ್ತಕ ಜ್ಞಾನ, ಅಕ್ಷರಜ್ಞಾನ ಮಾತ್ರವಲ್ಲ, ಮನಸ್ಸಿಗೆ ಸಂಸ್ಕಾರವನ್ನು ಕೊಡುವುದೂ ಸಹ ಶಿಕ್ಷಣದ ಒಂದು ಭಾಗ. "ವಿದ್ಯಾರ್ಥಿಗಳಿಗೆ ಔದ್ಯೋಗಿಕ, ವ್ಯಾವಹಾರಿಕ ಮತ್ತು ಆಧ್ಯಾತ್ಮಿಕ ಈ ಮೂರೂ ಶಿಕ್ಷಣಗಳನ್ನು ಕೊಡಬೇಕು" ಎಂಬುದು ನಮ್ಮ ಲಿಂಗೈಕ್ಯ ಗುರುವರ್ಯರ ನಿಲುವಾಗಿತ್ತು. ಬುದ್ಧಿಯ ವಿಕಾಸದೊಂದಿಗೆ ಹೃದಯವಂತಿಕೆಯನ್ನು ಬೆಳೆಸುವುದೂ ಶಿಕ್ಷಣದ ಗುರಿ. ಅದು ಈಡೇರಿದಾಗ ಮಾತ್ರ ಶಿಕ್ಷಣ ಸಮಗ್ರವೆನಿಸುತ್ತದೆ.

ಶಾಲೆಗಳಲ್ಲಿ ಮಗುವು ತನ್ನ ಜನ್ಮದಿನದಂದು ಸಹಪಾಠಿಗಳಿಗೆ ಚಾಕೊಲೇಟ್ ಹಂಚುವುದನ್ನು ಪ್ರೋತ್ಸಾಹಿಸಲಾಗುತ್ತದೆ. ಅಂದು ಮಗುವು ಸಡಗರದಿಂದ ಚಾಕೊಲೇಟನ್ನು ಸಹಪಾಠಿಗಳಿಗೆ ಹಂಚುವುದರ ಮೂಲಕ ತನ್ನ ಖುಷಿಯನ್ನು ಹಂಚಿಕೊಳ್ಳುತ್ತದೆ. ಸಹಪಾಠಿಗಳೂ ಸಹ ಶುಭಾಶಯವನ್ನು ಕೋರಿ ಅದರ ಸಂತಸವನ್ನು ನೂರ್ಮಡಿಗೊಳಿಸುತ್ತಾರೆ. ಹಾಗೆಯೇ ವ್ಯಕ್ತಿಯು ತನ್ನ ದುಡಿಮೆಯ ಸ್ವಲ್ಪ ಭಾಗವನ್ನು ತಾನು ನಾನಾ ರೀತಿಯಿಂದ ಉಪಕಾರ ಪಡೆದ ಸಮಾಜಕ್ಕೆ ಸಮರ್ಪಿಸಿ ಸಾಮಾಜಿಕ ಋಣವನ್ನು ಕಿಂಚಿತ್ ತೀರಿಸಿ ಸಾರ್ಥಕ್ಯ ಪಡೆಯುವುದರ ಬೀಜರೂಪವೇ ಈ ಪ್ರಕ್ರಿಯೆ ಎನ್ನಬಹುದು. **'ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ'** ಎನ್ನುವ ಬಸವಣ್ಣನವರ ಮಾತಿನಲ್ಲಿರುವುದೂ ಸಹ ಈ ತತ್ವವೇ. ಜಂಗಮ ಎಂಬುದನ್ನು ಸಮಾಜ ಎಂಬರ್ಥದಲ್ಲಿ ಗ್ರಹಿಸಿದರೆ ಇದರ ವಿಶಾಲಾರ್ಥ ಗೋಚರಿಸುತ್ತದೆ. **'ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು'** ಎಂಬ ಬಸವಣ್ಣನವರ ಇನ್ನೊಂದು ವಚನದಲ್ಲಿರುವ ಅರ್ಥವಾದರೂ ಇದೇ ಆಗಿದೆ. ಚೀಲದಲ್ಲಿ ಧಾನ್ಯವನ್ನು ತುಂಬಿಕೊಂಡು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಸುಂಕದಕಟ್ಟೆಯಲ್ಲಿ ಸುಂಕವನ್ನು ಕೊಡಲೇಬೇಕು. ಇಲ್ಲದಿದ್ದರೆ ಅದು ವಂಚನೆಯಾಗುತ್ತದೆ (tax evasion). ಹಾಗೆಯೇ ಭಕ್ತಿಯೆಂಬ ಭಾಂಡವನ್ನು (ಸರಕು) ತುಂಬಿಕೊಂಡರೆ ಹಣದ ಮೋಹ ದೂರವಾಗಬೇಕು. ಗುರುಗಳಿಗೆ, ಮಠಕ್ಕೆ ಕೊಡುವ ಕಾಣಿಕೆ ಸಾಮಾಜಿಕ ಋಣ ತೀರಿಸಲು ವ್ಯಕ್ತಿ ಕೊಡುವ 'ಸುಂಕ'. ಈ ರೀತಿ 'ಸುಂಕ' ಕೊಡುವುದರಿಂದ ವ್ಯಕ್ತಿಯಲ್ಲಿನ ಕೂಡಿಡುವ ಸ್ವಾರ್ಥ ಭಾವವು ಕಿಂಚಿತ್ ಮಾಯವಾಗಿ ಪರಾರ್ಥ ಭಾವನೆಯು ಬೆಳೆಯುತ್ತದೆ.

ವಿದ್ಯೆ ಎಂದರೇನು? ಅದರಿಂದ ವ್ಯಕ್ತಿಗೆ ಏನು ಸಿಗುತ್ತದೆ? ಈ ಪ್ರಶ್ನೆಗಳನ್ನು ಕುರಿತು ಒಂದು ಅಪರೂಪದ ಸಂಸ್ಕೃತ ಸುಭಾಷಿತವಿದೆ:

**ವಿದ್ಯಾ ದದಾತಿ ವಿನಯಂ**
**ವಿನಯಾದ್ ಯಾತಿ ಪಾತ್ರತಾಂ ।**
**ಪಾತ್ರತ್ವಾದ್ ಧನಮಾಪ್ನೋತಿ**
**ಧನಾದ್ ಧರ್ಮಂ, ತತಃ ಸುಖಮ್ ॥**

ವಿದ್ಯೆ ಮನುಷ್ಯನಿಗೆ ವಿನಯವನ್ನು ತಂದುಕೊಡುತ್ತದೆ. ವಿನಯದಿಂದ ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಆ ವ್ಯಕ್ತಿತ್ವದಿಂದ ಹಣ ಸಂಪಾದನೆಯಾಗುತ್ತದೆ. ಸಂಪಾದಿಸಿದ ಹಣ ಧರ್ಮಕಾರ್ಯಗಳಲ್ಲಿ ಸದ್ವಿನಿಯೋಗವಾಗಿ ಸುಖ ದೊರೆಯುತ್ತದೆ: ವಿದ್ಯೆ → ವಿನಯ → ಪಾತ್ರತ್ವ → ಧನ → ಧರ್ಮ → ಸುಖ. ಆದರೆ ಆಧುನಿಕ ಶಿಕ್ಷಣದಲ್ಲಿ ವಿದ್ಯೆ ವಿನಯವನ್ನು ತಂದುಕೊಡುತ್ತಿಲ್ಲ. ನಾನು ವಿದ್ಯಾವಂತ, ಬುದ್ಧಿವಂತ, ಪದವೀಧರ ಎಂಬ ಅಹಂಕಾರವನ್ನು ತಂದುಕೊಡುತ್ತಿದೆ. ಅಹಂಕಾರದಿಂದ ವ್ಯಕ್ತಿ ಅಯೋಗ್ಯನೆನಿಸಿಕೊಳ್ಳುತ್ತಾನೆ. ಅಯೋಗ್ಯನೂ ಸಹ ಅಪಾಮಾರ್ಗದಿಂದ ಅಪಾರ ಹಣ ಸಂಪಾದನೆ ಮಾಡುತ್ತಾನೆ. ಆ ಹಣವನ್ನು ಅವನು ಧರ್ಮಕಾರ್ಯಗಳಿಗೆ ಬಳಸುವುದಕ್ಕಿಂತ ಅಧರ್ಮಕಾರ್ಯಗಳಿಗೇ ಬಳಸುವುದು ಹೆಚ್ಚು. ಅದರ ಪರಿಣಾಮವಾಗಿ ಅವನಿಗೆ ಸುಖ ಸಿಗುವ ಬದಲು ಅಶಾಂತಿಗೆ ಒಳಗಾಗಿ ಬದುಕಿನಲ್ಲಿ ನೆಮ್ಮದಿ ಇಲ್ಲದಂತಾಗಿದೆ: ವಿದ್ಯೆ → ಅಹಂಕಾರ → ಅಪಾತ್ರತ್ವ → ಕಪ್ಪು ಹಣ/ಅಕ್ರಮ ಸಂಪತ್ತು → ಅಧರ್ಮ → ಅಶಾಂತಿ.

ಅನ್ನ ಪಾನೀಯಗಳನ್ನು ನೀಡುವುದರ ಮೂಲಕ ಹಸಿವು ಬಾಯಾರಿಕೆಗಳನ್ನು ನೀಗಿಸಬಹುದು. ಎಷ್ಟೇ ಹಸಿದಿದ್ದರೂ, ಬಂಡಿ ಅನ್ನವನ್ನು ಉಣ್ಣುವ ಭೀಮನಾದರೂ ಅವನ ಹೊಟ್ಟೆಯೂ ತುಂಬಲೇಬೇಕು, ತುಂಬಿದ ನಂತರ 'ಸಾಕು' ಎನ್ನಲೇಬೇಕು. ಆದರೆ ಇದೇ ಮಾತನ್ನು ಮನುಷ್ಯನ ಹಣದ ಹಸಿವಿಗೆ ಸಂಬಂಧಿಸಿದಂತೆ ಹೇಳಲು ಸಾಧ್ಯವಿಲ್ಲ. ಗಳಿಸಿದಷ್ಟೂ ಹೆಚ್ಚಾಗುತ್ತಾ ಹೋಗುವ ಎಂದೂ ತಣಿಯದ ಹಸಿವದು. **'ನ ವಿತ್ತೇನ ತರ್ಪಣೀಯೋ ಮನುಷ್ಯಃ'** ಎನ್ನುತ್ತದೆ ಕಠೋಪನಿಷತ್. ಅಂದರೆ ಮನುಷ್ಯನನ್ನು ಹಣದಿಂದ ತೃಪ್ತಿಗೊಳಿಸಲು ಸಾಧ್ಯವಿಲ್ಲ. ವ್ಯಾಪಾರಿ, ಮಂತ್ರಿ, ನ್ಯಾಯಾಧೀಶ, ಮಠಾಧೀಶ ಹೀಗೆ ಎಲ್ಲರೂ ಕಾಂಚನಮೃಗದ ಬೆನ್ನು ಹತ್ತಿರುವವರೇ ಆಗಿದ್ದಾರೆ. ಇವರಾರಿಗೂ ಹಣದಿಂದ ತೃಪ್ತಿ ಸಿಗಲಾರದು. ಹೀಗೆಂದ ಮಾತ್ರಕ್ಕೆ ಹಣದ ಅವಜ್ಞೆ ಸಲ್ಲ. ಹಣವೂ ಸಹ ಒಂದು ಮೌಲ್ಯ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಅರ್ಥ ಅಂದರೆ ಹಣವೂ ಒಂದು ಮೌಲ್ಯವೇ ಆಗಿದ್ದು ಅದರ ಗಳಿಕೆಯು ಧರ್ಮಬದ್ಧವಾಗಿರಬೇಕು ಎಂಬುದೇ ಭಾರತೀಯ ದಾರ್ಶನಿಕರ ಸದಾಶಯ.

ಸಹೃದಯ ಓದುಗರೇ! ವಿದ್ಯೆ ಹಣ ಗಳಿಕೆಯ ಸಾಧನವಾಗದೆ ವ್ಯಕ್ತಿತ್ವವನ್ನು ರೂಪಿಸುವ ಸಾಧನವಾದಾಗ ಮಾತ್ರ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ ಸಿಗಲು ಸಾಧ್ಯ.

14.6.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑